# ಸೀರಿಯಲ್ಲೇ ನನಗೀಗ ಜೀವನ

**ರೋಹಿತ್**
ಉದಯದ 'ಸೇವಂತಿ'ಯ ಕರ್ಣ



◆ **ಸೇವಂತಿಯಲ್ಲಿ ನಿಮ್ಮ ಪಾತ್ರ ಹೇಗಿದೆ?**

ನಾಯಕನ ಪಾತ್ರಕ್ಕೆ ಸರಿಸಮಾನವಾಗಿ ತೂಗುವಂತೆ ನನ್ನ ಪಾತ್ರವನ್ನು ರೂಪಿಸಿದ್ದಾರೆ. ಮೊದಲು ನಾನು ಅದನ್ನು ನೆಗೆಟಿವ್ ಪಾತ್ರ ಎಂದುಕೊಂಡಿದ್ದೆ. ಚಿತ್ರೀಕರಣಕ್ಕೆ ಹೋದ ನಂತರವೇ ಅದು ಹಾಗಿಲ್ಲ ಎನ್ನುವುದು ಗೊತ್ತಾಯಿತು. ಕಥೆ ಬೇರೆ ರೀತಿನೇ ಹೋಗ್ತಿದೆ. ಮನೆಯಲ್ಲಿ ಯಾರನ್ನು ಕಂಡರೂ ನನಗೆ ಆಗುವುದಿಲ್ಲ. ಏಕೆಂದರೆ, ನನ್ನ ತಂದೆಗೆ ಇಬ್ಬರು ಪತ್ನಿಯರು. ನನ್ನ ತಾಯಿ ತೀರಿ ಹೋಗಿದ್ದಾರೆ. ಅದಕ್ಕೆ ಆ ಮನೆಯವರೇ ಕಾರಣ ಎಂದು ನಾನು ಅಂದುಕೊಂಡಿರುತ್ತೇನೆ. ವಾಸ್ತವ ಹಾಗಿರುವುದಿಲ್ಲ. ಮೊದಲೆಲ್ಲ ನೆಗೆಟಿವ್ ಪಾತ್ರಗಳನ್ನು ಹೆಚ್ಚು ನಿರ್ವಹಿಸಿದ್ದೇನೆ. ಕಥೆಯ ಪ್ರಕಾರ ಪಾತ್ರಕ್ಕೆ ಒಂದು ಮಹತ್ವ ಇದೆ. ಅದರದ್ದೇ ಆದ ಭಿನ್ನ ದಾರಿಯಲ್ಲಿ ಸಾಗುತ್ತಿದೆ. ಒಟ್ಟಾರೆ, ಪಾತ್ರ ತುಂಬ ಇಷ್ಟ ಆಯಿತು.

◆ **ನಟ ಆಗುವ ಬಯಕೆ ಹುಟ್ಟಿದ್ದು ಹೇಗೆ?**

ಈ ಕ್ಷೇತ್ರಕ್ಕೆ ಬಂದು ಹತ್ತು ವರ್ಷಗಳಾದವು. ಕಷ್ಟದಿಂದ ಒದ್ದಾಡಿಕೊಂಡು ಈ ಹಂತದ ತನಕ ಬೆಳೆದಿದ್ದೇನೆ. ಇಲ್ಲಿಗೆ ಬರುತ್ತೇನೆ ಎಂದುಕೊಂಡಿರಲಿಲ್ಲ. ಡಿಗ್ರಿ ಮುಗಿಸಿ ಯಾವುದಾದರೂ ಕೆಲಸಕ್ಕೆ ಹೋಗಬೇಕು ಎನ್ನುವುದಷ್ಟೇ ಆಲೋಚನೆ ಇತ್ತು. ನಮ್ಮ ಮನೆಯ ಹತ್ತಿರ ನಾರಾಯಣಗೌಡ ಎನ್ನುವವರ ಮನೆ ಇತ್ತು. ಅವರು ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಒಮ್ಮೆ ನನಗೆ ಆ್ಯಕ್ಟ್ ಮಾಡ್ತೀಯಾ ಎಂದು ಕೇಳಿದರು. ಆ ಜನಪ್ರಿಯತೆ ಯಾರಿಗೆ ತಾನೆ ಇಷ್ಟ ಆಗುವುದಿಲ್ಲ. ಅವರು ಕೇಳಿದ ತಕ್ಷಣ ಆಯ್ತು ಅಂಕಲ್ ಮಾಡ್ತೀನಿ ಅಂದೆ. ಆಯ್ತು ಅಂದ್ರೆ ಆಗಲ್ಲ. ಅದಕ್ಕೊಂದಿಷ್ಟು ತಯಾರಿ ಮಾಡಿಕೊಳ್ಳಬೇಕು ಡಾನ್ಸ್–ಫೈಟ್ ಕಲಿಯಬೇಕು ಎಂದು ಹೇಳಿದರು. ಅವರ ಸೂಚನೆಯಂತೆ ಅದೆಲ್ಲ ಕಲಿತೆ. ನಂತರ 'ಶ್ರೀಮತಿ ಭಾಗ್ಯಲಕ್ಷ್ಮಿ' ಧಾರಾವಾಹಿ ನಿರ್ದೇಶಕರನ್ನು ಪರಿಚಯಿಸಿದರು. ಅದೇ ನನ್ನ ಮೊದಲ ಧಾರಾವಾಹಿ, ಅದೂ ನೆಗೆಟಿವ್ ಪಾತ್ರ. ಅದಕ್ಕೂ ಮುಂಚೆ ನಟನೆ ತರಗತಿಗೆ ಹೋಗಿ ಕಲಿತಿದ್ದೆ.

◆ **ನಿಮ್ಮ ಬೆಳವಣಿಗೆ ಬಗ್ಗೆ ನಿಮ್ಮ ಬಳಗ ಏನು ಹೇಳುತ್ತದೆ?**

ಆರಂಭದಲ್ಲಿ ತುಂಬ ಹೋರಾಟದ ದಿನಗಳನ್ನು ಎದುರಿಸಿದ್ದೇನೆ. ಅವಕಾಶಗಳು ಸಿಗುವುದೇ ಕಷ್ಟ ಇತ್ತು. ಪುಟ್ಟ ಅವಕಾಶಕ್ಕೂ ತುಂಬ ಖುಷಿ ಸಿಗುತ್ತಿತ್ತು. ಬರ್ತಾ ಬರ್ತಾ ಕೆಲಸಗಳು ಸಿಗಲು ಶುರುವಾದವು. ಮೊದಲು ನನಗೆ ಅಷ್ಟು ಐಡೆಂಟಿಟಿ ಕೂಡ ಸಿಕ್ಕಿರಲಿಲ್ಲ. ಈಗ ಪರ್ವಾಗಿಲ್ಲ. ಸಾಕಷ್ಟು ಕಡೆಗಳಲ್ಲಿ ನನ್ನನ್ನು ಗುರುತಿಸುತ್ತಾರೆ. ಕಷ್ಟಪಟ್ಟು ಕೆಲಸ ಮಾಡಿದ್ದಕ್ಕೆ ಸಾರ್ಥಕವಾಯಿತು ಎಂದು ಅನ್ನಿಸುತ್ತದೆ. ನನ್ನ ಗೆಳೆಯರು ಆರಂಭದಿಂದಲೂ ಹುರಿದುಂಬಿಸಿದ್ದಾರೆ. ನನ್ನ ಧಾರಾವಾಹಿಗಳನ್ನು ನೋಡಿದ್ದಲ್ಲದೆ, ಅವರ ಸಂಬಂಧಿಕರು ಸ್ನೇಹಿತರಿಗೂ ನೋಡಲು ಹೇಳಿದ್ದಾರೆ.

◆ **ನಿಮ್ಮ ಪರಿಕಲ್ಪನೆಯಲ್ಲಿ ಪಾತ್ರ ಅಂದರೆ ಏನು?**

ಸೀರಿಯಲ್ ಎನ್ನುವುದಕ್ಕಿಂತ ಸಿನಿಮಾಕ್ಕೆ ಈ ಪ್ರಶ್ನೆಯನ್ನು ಅನ್ವಯಿಸುತ್ತೇನೆ. ಧಾರಾವಾಹಿಗಳಲ್ಲಿ ಒಂದು ಕಥೆ ಹೇಗೆ ಬೆಳೆಯುತ್ತೋ ಹಾಗೆಯೇ ಪಾತ್ರ ಬೆಳೆಯುತ್ತೆ. ವಾರ ವಾರಕ್ಕೂ ಅದರ ತಿರುವುಗಳು ಬದಲಾಗಬಹುದು. ಇಲ್ಲವೇ ತಿಂಗಳಿಗೆ ಮತ್ತೊಂದು ರೀತಿಯಲ್ಲಿ ಹೋಗಬಹುದು. ಸಿನಿಮಾ ಹಾಗಲ್ಲ. ಒಮ್ಮೆ ಕಥೆಯಾದರೆ ಅದೇ ಚೌಕಟ್ಟಿನಲ್ಲಿ ಕಥೆ ಅಥವಾ ಪಾತ್ರ ಕೂರುತ್ತದೆ. ನನಗೆ ವಾಸ್ತವವಾದಿ ನೆಲೆಯ ಕಥೆಗಳು ಇಷ್ಟ ಆಗುತ್ತವೆ. ಇನ್ನೊಬ್ಬರ ಬದುಕನ್ನು ನಟನೊಬ್ಬ ಅಳವಡಿಸಿಕೊಂಡು ಮಾಡುವುದು ಅದ್ಭುತ ಎಂದೆನಿಸುತ್ತದೆ. ಪಾತ್ರ ಹೇಗಿದ್ದರೂ ಇರಬಹುದು. ಆತ ನಾಯಕನೇ ಆಗಿರಬಹುದು ಖಳನಾಯಕನೇ ಆಗಿರಬಹುದು. ಇದೇ ರೀತಿ ಇರಬೇಕು ಎನ್ನುವ ಭಾವನೆ ಇಲ್ಲ. ನೈಜವಾಗಿ ಇರಬೇಕು ಎನಿಸುತ್ತದೆ. ಬದುಕಿದ ಪಾತ್ರ ಮಾಡುವುದು ನನಗೆ ಇಷ್ಟ. ಯಾವುದೇ ಸಿನಿಮಾ ನೋಡಿದಾಗ ಅದನ್ನು ಹೇಗೆಲ್ಲ ಮಾಡಬಹುದು ಎಂದು ಯೋಚಿಸುತ್ತೇನೆ. ಸಿನಿಮಾ ನೋಡುವಾಗ ಅದೇ ರೀತಿ ನೋಡುತ್ತೇನೆ.

◆ **ಧಾರಾವಾಹಿ ಅಂದರೆ ಬರೀ ಸ್ಯಾಡಿಸ್ಟ್ ಕಥೆ ಎಂದವರಿಗೆ ನೀವೇನು ಹೇಳಬಯಸುತ್ತೀರಿ?**

ಯಾರಿಗೂ ನೋವಾಗುವಂತೆ ಉತ್ತರ ಹೇಳಲ್ಲ. ಮೊದಲು ನಾನೂ ಹಾಗೆ ಇದ್ದೆ. ಯಾರಾದರೂ ಧಾರಾವಾಹಿ ನೋಡುತ್ತಿದ್ದರೆ ಅದೇನೂ ನೋಡ್ತೀರಾ ಬೋರ್ ಹೊಡೆಯುತ್ತೆ ಅಂತಿದ್ದೆ. ಈಗ ಅದು ನನಗೆ ಜೀವನ. ಹೀಗಿರುವಾಗ ಅವರಿಗೆ ಏನು ಹೇಳಬಹುದು ಅಂದರೆ, ಹೌದು ನೀವು ಹೇಳುವುದು ಸರಿ. ಆದರೆ ನಿಮ್ಮ ನಿಜ ಜೀವನದಲ್ಲಿ ಇಂತಹ ಪಾತ್ರ ಪ್ರವೇಶ ಮಾಡುವ ತನಕ ಸತ್ಯ ಗೊತ್ತಾಗುವುದಿಲ್ಲ. ಬಹುತೇಕರು ತಮ್ಮ ಅನುಭವಕ್ಕೆ ಬರುವತನಕ ಏನನ್ನೂ ಒಪ್ಪುವ ಸ್ಥಿತಿಯಲ್ಲಿ ಇರುವುದಿಲ್ಲ. ನೀವೂ ಅನುಭವಕ್ಕೆ ಬರುವತನಕ ಯಾವ ಕಥೆಯನ್ನೂ ನಂಬುವುದಿಲ್ಲ. ಮಾತ್ರವಲ್ಲ ಜೀವನದಲ್ಲಿ ಏನನ್ನೂ ನಂಬುವುದಿಲ್ಲ. ಅನುಭವಕ್ಕೆ ಬಂದಾಗಲೇ ಕಥೆಯನ್ನೂ ಜೀವನವನ್ನೂ ನಂಬ್ತೀರಿ ಅಂತ ಹೇಳ್ತೀನಿ. ನಾನು ಮೊದಲು ಸೀರಿಯಲ್ ಹಾಕುತ್ತಾರೆ ಎಂದು ಅಮ್ಮನಿಗೆ ರಿಮೋಟ್ ಕೊಡ್ತಿರಲಿಲ್ಲ. ಆಗೆಲ್ಲ ನನಗೆ ಅನಿಮೇಷನ್ ಹುಚ್ಚು. ಯಾವಾಗಲೂ ಅದನ್ನೇ ನೋಡ್ತಿದ್ದೆ. ಈಗ ಸೀರಿಯಲ್ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ.

■ **ರಾಘವೇಂದ್ರ ಕೆ.**